**ನವೀನ್ ರಾಜ್ ಸಿಂಗ್,** ಭಾ.ಆ.ಸೇ.,
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

Government of Karnataka

**NAVEEN RAJ SINGH,** I.A.S.,
Principal Secretary to Government
Youth Empowerment and Sports Department

ಅ.ಸ. ಪತ್ರ: ಯುಸೇಇ/ರಾಸೇಯೋ/69/2025-26/286 ದಿನಾಂಕ: 06.10.2025

**ಮಾನ್ಯ ಕುಲಪತಿಗಳು/ನಿರ್ದೇಶಕರುಗಳಿಗೆ,**

ವಿಷಯ: ಅಂತರ್ಜಲ ಮತ್ತು ಜಲ ಸಂರಕ್ಷಣೆ ಕಾರ್ಯಕ್ರಮ – ಕೆರೆಗಳನ್ನು ದತ್ತು ಪಡೆಯುವ ಕುರಿತು.
**(Groundwater Recharge Program – Adoption of Lakes)**

*******

ಅಂತರ್ಜಲವು ಭೂಮಿಯ ಮೇಲಿನ ಜೀವರಾಶಿಯ ಉಳಿವು ಮತ್ತು ಪೋಷಣೆಗೆ ಪ್ರಮುಖ ನೈಸರ್ಗಿಕ ಸಂಪನ್ಮೂಲವಾಗಿದ್ದು, ಕಾಲಕ್ರಮೇಣ ಇದರ ಮಟ್ಟವು ಕ್ಷೀಣಿಸುತ್ತಿರುವುದು ಆತಂಕಕಾರಿ ವಿಷಯವಾಗಿದೆ. ಜೀವವೈವಿಧ್ಯತೆಯನ್ನು ಕಾಪಾಡಿಕೊಳ್ಳುವ ನಿಟ್ಟಿನಲ್ಲಿ, ನೀರಿನ ಪೂರೈಕೆಯನ್ನು ನಿಯಂತ್ರಿಸಲು, ಪ್ರವಾಹವನ್ನು ತಡೆಗಟ್ಟಲು, ಅಂತರ್ಜಲವನ್ನು ಮರುಪೂರಣಗೊಳಿಸಲು ಹಾಗೂ ಸಂರಕ್ಷಿಸಲು ಜಲಮೂಲಗಳು (ಕೆರೆಗಳು) ನಿರ್ಣಾಯಕ ಪಾತ್ರ ವಹಿಸುತ್ತದೆ. ದೀರ್ಘಾವಧಿಯ ನೀರಿನ ಸುರಕ್ಷತೆಗಾಗಿ, ಜಲಮೂಲಗಳನ್ನು (ಕೆರೆಗಳು) ರಕ್ಷಿಸುವುದು ಮತ್ತು ಪುನರುಜ್ಜೀವನಗೊಳಿಸುವುದು ಅತ್ಯಗತ್ಯವಾಗಿದೆ.

ಆದ್ದರಿಂದ, ಸುಸ್ಥಿರ ಜಲ ಸಂರಕ್ಷಣಾ ಪದ್ಧತಿಗಳನ್ನು ಪ್ರೇರೇಪಿಸಲು ತಮ್ಮ ವಿಶ್ವವಿದ್ಯಾಲಯದ ಕಾಲೇಜುಗಳ ಎನ್. ಎಸ್. ಎಸ್. ಘಟಕಗಳ ವ್ಯಾಪ್ತಿಯ ಸಮೀಪದಲ್ಲಿ ಬರುವ ಜಲಮೂಲಗಳನ್ನು (ಕೆರೆಗಳು) ದತ್ತು ಪಡೆದುಕೊಳ್ಳುವುದರ ಮೂಲಕ ಈ ಕಾರ್ಯಕ್ರಮದಲ್ಲಿ ಎನ್.ಎಸ್.ಎಸ್. ಸ್ವಯಂ ಸೇವಕರು ಸಕ್ರಿಯವಾಗಿ ಭಾಗವಹಿಸಲು ಈ ಮೂಲಕ ಕೋರಿದೆ.

ಆದರಗಳೊಂದಿಗೆ,

ತಮ್ಮ ವಿಶ್ವಾಸಿ,

ಇವರಿಗೆ,
ಕುಲಪತಿಗಳು / ನಿರ್ದೇಶಕರು,
ಎಲ್ಲಾ ವಿಶ್ವವಿದ್ಯಾಲಯ/ನಿರ್ದೇಶನಾಲಯಗಳು.

ಕೊಠಡಿ ಸಂಖ್ಯೆ : 246, 2ನೇ ಹಂತ, 2ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು – 560 001.
Room No. 246, 2nd Stage, 2nd Floor, M.S. Building, Bengaluru – 560 001
Tel No. 080–22032589 / 22255827, E-mail: ysdsec@gmail.com / prs-yesd@karnataka.gov.in